# ಕದ ತೆರೆದ ಅವಕಾಶದಲ್ಲಿ ಮಯಂಕ್ ಮನಸಿನಾಟ



**ಸಚಿನ್, ದ್ರಾವಿಡ್ ಆಟ ನೋಡುತ್ತಲೇ ಬೆಳೆದ ಮಯಂಕ್ ಅಗರ್ವಾಲ್ ಎದುರಾಳಿ ಬೌಲರ್ ಯಾರು ಎನ್ನುವುದನ್ನು ತಲೆಗೆ ಇಳಿಸಿಕೊಳ್ಳದೆ ಆಡುವುದನ್ನು ಕಳೆದ ಎರಡೂವರೆ ವರ್ಷಗಳಲ್ಲಿ ಅಭ್ಯಾಸ ಮಾಡಿಕೊಂಡಿದ್ದಾರೆ. ದ್ರಾವಿಡ್ ಒಮ್ಮೆ ಹೇಳಿದ ಪಾಠ ಅವರನ್ನು ಯಾವ ಪರಿಯಾಗಿ ಬದಲಿಸಿದೆಯೆಂದರೆ, ಅದಕ್ಕೆ ಇತ್ತೀಚಿನ ಅವರ ಅನೇಕ ಇನಿಂಗ್ಸ್ ಗಳು ಉದಾಹರಣೆಯಾಗಿ ಸಿಗುತ್ತವೆ.**

**■ ವಿಶಾಖ ಎನ್.**

‘ಗಂಟಲುಬ್ಬಿ ಬರಕೂಡದು. ಆಟದ ಒತ್ತಡವನ್ನು ತಲೆಗೆ ಹಾಕಿಕೊಳ್ಳಬೇಡ. ಅದರಿಂದಲೇ ನೀನು ನಲುಗುತ್ತಿರುವೆ’ ಹೀಗೊಂದು ಪಾಠವನ್ನು ಮಯಂಕ್ ಅಗರ್ ವಾಲ್‌ಗೆ ರಾಹುಲ್ ದ್ರಾವಿಡ್ ವರ್ಷಗಳ ಹಿಂದೆ ಹೇಳಿದ್ದರು. ರಾಹುಲ್ ಅವರನ್ನು ‘ರಾಹುಲ್ ಭಾಯ್’ ಎಂದೇ ಸಂಬೋಧಿಸುವ ಮಯಂಕ್, ಅವರು ಹೇಳಿಕೊಟ್ಟ ಪಾಠವನ್ನು ಕಣ್ಣಿಗೊತ್ತಿಕೊಂಡಿದ್ದಾರೆನ್ನುವುದು ಮೆಲ್ಬರ್ನ್‌ನಲ್ಲಿ ಅವರು ತಮ್ಮ ಮೊದಲ ಅಂತರರಾಷ್ಟ್ರೀಯ ಟೆಸ್ಟ್ ಪಂದ್ಯ ಆಡಿದಾಗ ಗೊತ್ತಾಯಿತು.

ಮೆಲ್ಬರ್ನ್ ಇರುವುದು ಆಸ್ಟ್ರೇಲಿಯಾದಲ್ಲಿ. ಅಡಿಲೇಡ್ ಇರುವುದೂ ಅಲ್ಲೇ. 2003ರಲ್ಲಿ ಆ ಅಡಿಲೇಡ್‌ನಲ್ಲಿ ದ್ರಾವಿಡ್ ಎರಡು ಇನಿಂಗ್ಸ್ ಗಳಿಂದ 835 ನಿಮಿಷ (ಹನ್ನೆರಡೂಕಾಲು ಗಂಟೆ) ಆಡಿದ್ದರು. ಆಸ್ಟ್ರೇಲಿಯಾದಂಥ ಬಲಶಾಲಿ ತಂಡದ ಮೇಲೆ ಒಂದು ಟೆಸ್ಟ್ ಪಂದ್ಯ ಗೆದ್ದಿದ್ದು ಆಗ ಬಹು ದೊಡ್ಡ ವಿಷಯ. ಅದು ಹಾಗಿರಲಿ, ಅದಾಗಿ ಕೆಲವೇ ತಿಂಗಳ ನಂತರ ಪಾಕಿಸ್ತಾನದ ವಿರುದ್ಧ 270 ರನ್ ಜಮೆ ಮಾಡಲು ದ್ರಾವಿಡ್ 12 ತಾಸು ಆಡಿದ್ದರು. ಭಾರತ ಆಗ ಪಾಕ್ ಎದುರು ಅದರ ನೆಲದಲ್ಲಿ ಮೊದಲ ಟೆಸ್ಟ್ ಸರಣಿ ಗೆದ್ದಿತ್ತು.

ಮೊನ್ನೆ ಮಯಂಕ್ ಆಗಿನಷ್ಟು ಪ್ರಬಲವಲ್ಲದ ಆಸ್ಟ್ರೇಲಿಯನ್ನರ ವಿರುದ್ಧವೇ ಮೊದಲ ಇನಿಂಗ್ಸ್ ಆಟದಲ್ಲಿ 76 ರನ್ ಗಳಿಸಿದರು. ತಡಕಾಡಿ ನೋಡಿದರೂ ಅವರು ಎಷ್ಟು ನಿಮಿಷ ಆಡಿದರು ಎನ್ನುವುದು ಬಹುತೇಕ ಮಾಧ್ಯಮಗಳಿಗೆ ಮುಖ್ಯವಾಗಿರಲೇ ಇಲ್ಲ. ಟೀ ವಿರಾಮಕ್ಕೆ ಕೊಂಚ ಮುನ್ನ ಪ್ಯಾಟ್ ಕಮಿನ್ಸ್ ಎಸೆತ ಕೆಣಕಿ ಅವರು ಲೆಗ್ ಸೈಡ್ ಭಾಗದಲ್ಲಿ ಕ್ಯಾಚ್ ಕೊಟ್ಟು ಹೊರಟಾಗ ಹಲವು ದಾಖಲೆಗಳು ಯಾವ್ಯಾವುದೋ ಪುಟಗಳಲ್ಲಿ ತಂತಾವೇ ಮೂಡಿದ್ದವು.

ಮೆಲ್ಬರ್ನ್ ಕ್ರಿಕೆಟ್ ಗ್ರೌಂಡ್ ನಲ್ಲಿ 1947ರಲ್ಲಿ ದತ್ತು ಫಾಡ್ಕರ್ ಚೊಚ್ಚಿಲ ಪಂದ್ಯದಲ್ಲಿ ಭಾರತದ ಪರವಾಗಿ ಅರ್ಧ ಶತಕ ಗಳಿಸಿದ್ದು ಬಿಟ್ಟರೆ ದೇಶದ ಇನ್ನೊಬ್ಬ ಆಟಗಾರ ಈ ಸಾಧನೆ ಮಾಡಿರಲಿಲ್ಲ. 1936ರ ನಂತರ ಇಬ್ಬರೂ ಹೊಸ ಆರಂಭಿಕ ಆಟಗಾರರು ಭಾರತದ ಪರವಾಗಿ ಟೆಸ್ಟ್‌ನಲ್ಲಿ ಆಡಿದ್ದು ಇದೇ ಮೊದಲು (ಹನುಮ ವಿಹಾರಿ ಮೊದಲ ಬಾರಿಗೆ ಆರಂಭಿಕ ಆಟಗಾರನಾಗಿ ಕಣಕ್ಕೆ ಇಳಿದದ್ದು). ಸುಧೀರ್ ನಾಯಕ್ (77) ಬಿಟ್ಟರೆ ಮೊದಲ ಟೆಸ್ಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ್ದು ಮಯಂಕ್. ಆಸ್ಟ್ರೇಲಿಯಾ, ಇಂಗ್ಲೆಂಡ್, ನ್ಯೂಜಿಲೆಂಡ್ ಹಾಗೂ ದಕ್ಷಿಣ ಆಫ್ರಿಕಾ ನೆಲಗಳಲ್ಲಿ 2010ರ ಡಿಸೆಂಬರ್ ನಂತರ ಸುದೀರ್ಘಾವಧಿ (18.5 ಓವರ್) ಆರಂಭಿಕ ಜೋಡಿ ಆಡಿದ್ದು ಇದೇ ಮೊದಲು. ಸೆಂಚೂರಿಯನ್‌ನಲ್ಲಿ ವೀರೇಂದ್ರ ಸೆಹ್ವಾಗ್ ಹಾಗೂ ಗೌತಮ್ ಗಂಭೀರ್ 29.3 ಓವರ್‌ಗಳಷ್ಟು ಮೊದಲ ವಿಕೆಟ್ ಜೊತೆಯಾಟ ನೀಡಿ 8 ವರ್ಷಗಳೇ ಆಗಿಬಿಟ್ಟವು.

ದಾಖಲೆಗಳ, ಆಟದ ಸ್ಥಿರತೆಯ ಪ್ರಶ್ನೆ ಬಂದಾಗಲೆಲ್ಲ ಸೌರವ್ ಗಂಗೂಲಿ ನೆನಪಾಗುತ್ತಾರೆ. ಅವರು ತಮ್ಮ ಕ್ರಿಕೆಟ್ ವೃತ್ತಿಬದುಕಿನ ಸಂಜೆಕಾಲದಲ್ಲಿ ಟೀಕಾಕಾರರಿಗೆ ಅಂಕಿಅಂಶ ತಿಳಿಸಲೆಂದೇ ಜೇಬಿನಲ್ಲೊಂದು ಚೀಟಿ ಇಟ್ಟುಕೊಂಡು ಬರುತ್ತಿದ್ದರು. ಅದರಲ್ಲಿ ಕಳೆದ ಹತ್ತು, ಇಪ್ಪತ್ತು ಪಂದ್ಯಗಳಲ್ಲಿ ಎಷ್ಟು ಸರಾಸರಿಯಲ್ಲಿ ರನ್ ಬಂದಿದೆ ಎನ್ನುವ ವಿವರ ಇರುತ್ತಿತ್ತು. ಪಾಪ ಮಯಂಕ್, ಆಯ್ಕೆದಾರರ ಮನವೊಲಿಸಲು ದೊಡ್ಡ ಸ್ಕೋರ್ ಬೋರ್ಡ್‌ಗಳನ್ನೇ ತೋರಿಸುವಂತೆ ಒಂದೂವರೆ ವರ್ಷದಿಂದ ಆಡುತ್ತಿದ್ದಾರಾದರೂ ಅವರಿಗೆ ಅದೃಷ್ಟ ಒಲಿದಿದ್ದು ತಡವಾಗಿ.

‘ನಾನು ಕ್ರಿಕೆಟ್ ಆಡತೊಡಗಿದ್ದೇ ಸಚಿನ್ ತೆಂಡೂಲ್ಕರ್ ಆಟದ ವೈಖರಿ ನೋಡಿ’ ಎಂದು ಹೇಳಿಕೊಂಡಿದ್ದ ಮಯಂಕ್, ಮೊದಲು ಟೆನಿಸ್ ಬಾಲ್‌ನಲ್ಲಿ ಆಡಿ ಪಳಗಿದ್ದರು. ಅವರು ಲೆದರ್ ಬಾಲ್ ಆಟಕ್ಕೆ ಒಗ್ಗಿಕೊಂಡಿದ್ದು ಮೊದಲ ಮಾನಸಿಕ ಹೋರಾಟ. ಶಾಲಾ ತಂಡದಲ್ಲಿ ಛಾಪು ಮೂಡಿಸಿದ ಮೇಲೆ 13 ವರ್ಷದೊಳಗಿನ ತಂಡದಲ್ಲಿ ಆರಂಭಿಕ ಆಟಗಾರ ಆದರು. 2011ರಲ್ಲಿ ‘ಇಂಡಿಯನ್ ಪ್ರೀಮಿಯರ್ ಲೀಗ್’ (ಐಪಿಎಲ್) ಅವಕಾಶ ಬಾಗಿಲು ತೆರೆಯಿತು. ಮೂರು ಋತುಗಳಲ್ಲಿ ಡೆಲ್ಲಿ ಡೇರ್ ಡೇವಿಲ್ಸ್ ಪರವಾಗಿ ಆಟ. 2017ರಲ್ಲಿ ಪುಣೆ ತಂಡ ಫೈನಲ್ಸ್ ಆಡಿದ ಸಂಭ್ರಮಕ್ಕೆ ಸಾಕ್ಷಿಯಾದರು. 19